



**ಅಸ್ಮಿತೆ (ಕತೆಗಳು)**
**ಲೇ:** ಕೃಷ್ಣಮೂರ್ತಿ ಚಂದರ್
**ಪು:** 152 ಬೆ: ರೂ. 150
**ಪ್ರ:** ಅಭಿನವ ಪ್ರಕಾಶನ
ನಂ. 17/18–3,
ಮೊದಲನೇ ಮುಖ್ಯರಸ್ತೆ,
ಮಾರೇನಹಳ್ಳಿ, ವಿಜಯನಗರ,
ಬೆಂಗಳೂರು – 560 040

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

ನಡೆಸುತ್ತಿರುವ ಮನುಷ್ಯನ ಅಸ್ಮಿತೆಯ ಶೋಧದ ನೆಲೆಗಳು ಕೊಂಚ ಸುಲಭವಾಗಿ ಅರ್ಥವಾಗುತ್ತವೆ. ಮನುಷ್ಯನಿಗೆ ಒಂದು ನಿರ್ದಿಷ್ಟ ಚಹರೆ, ಅಸ್ಮಿತೆ ಲಭಿಸುವುದು ಯಾವುದರಿಂದ? ದೇಹ, ಮನಸ್ಸು, ಯೋಚನಾಕ್ರಮಗಳಲ್ಲಿ ಯಾವುದು ನಮ್ಮ ಕಲ್ಪನೆಯ ವ್ಯಕ್ತಿತ್ವಕ್ಕೆ ಮೂರ್ತ ವ್ಯಕ್ತಿಯನ್ನು ಜೋಡಿಸುವಂಥ ತಂತು? ಇದನ್ನು ಹೇಳುವುದು ಕಷ್ಟ. ಬದುಕಿನಲ್ಲಿ ಎಲ್ಲವೂ ಅರ್ಥವಾಗುವುದಿಲ್ಲ, ವ್ಯಾಖ್ಯಾನಕ್ಕೆ ದಕ್ಕುವುದಿಲ್ಲ ಎನ್ನುವುದು ನಿಜ. ಮೂರ್ತವಾಗಿ ಇರುವುದರ ಮೂಲಕ, ಅದನ್ನೇ ಆಧಾರವಾಗಿಟ್ಟುಕೊಂಡು ಅಮೂರ್ತವಾದ ಕೆಲವೊಂದು ಹೊಳಹುಗಳ ಜೊತೆ, ಅನೂಹ್ಯಗಳ ಜೊತೆ ಅದನ್ನು ಜೋಡಿಸಿಯೇ ಇದನ್ನು ಅರ್ಥಮಾಡಿಕೊಳ್ಳಬೇಕಾದ ಅನಿವಾರ್ಯ ನಮಗಿದೆ. ಈ ಸಂಕಲನದ 'ಅಸ್ಮಿತೆ', 'ಪಿತೃಪಕ್ಷ', 'ಭುವನ', 'ಭ್ರಮೆಯೊಳಗಿನ ವಾಸ್ತವ', ಮತ್ತು 'ನವ್ಯೋತ್ತರ' ಕತೆಗಳು ಒಂದಕ್ಕಿಂತ ಒಂದು ವಿಭಿನ್ನ ನೆಲೆಯಲ್ಲಿ ಮನುಷ್ಯನ ಐಡೆಂಟಿಟಿಯ ಸುತ್ತ ಗಿರಕಿ ಹೊಡೆಯುತ್ತವೆ. ನಾನು ಪ್ರಜ್ಞಾಪೂರ್ವಕ ಇನ್ನೊಬ್ಬನಾಗುವ, ನನಗೆ ನಾನು ನಿಜಕ್ಕೂ ಆ ಇನ್ನೊಬ್ಬನಾಗಿರಬಹುದಾದ ಅನುಮಾನ ಬರುವ, ನಾನು ಉದ್ದೇಶಪೂರ್ವಕ ಇನ್ನಾರೋ ಆಗಲು ಹೊರಡುವ, ಥಟ್ಟನೇ ನಿನ್ನೆಯಿಂದ ಕಳಚಿಕೊಂಡು ಇವತ್ತು ಇನ್ನೊಬ್ಬನೇ ಆಗಿಬಿಡುವ, ಯಾರನ್ನೋ ನೋಡಿದಾಗ ಇನ್ಯಾರನ್ನೋ ಕಂಡಂತಾಗುವ, ಅವರೇ ಇವರೋ ಅಥವಾ ಇವರೇ ಅವರೋ ಎಂಬುದು ಒಗಟಾಗಿ ಬಿಡುವ ಸೋಜಿಗವನ್ನು ಬದುಕಿನ ಬಹುಮುಖ್ಯ ಮತ್ತು ಶಾಶ್ವತ ಸತ್ಯಗಳ ನೆರಳಿನಲ್ಲಿ ಕಾಣಿಸುವ ಕತೆಗಳು ತಮ್ಮದೇ ಆದ ದರ್ಶನ, ಒಳನೋಟ, ಕಾಣ್ಕೆ ಒದಗಿಸಬಲ್ಲ ಶಕ್ತಿಯನ್ನೂ ಹೊಂದಿವೆ, ಅದನ್ನು ಮೀರಿಸಬಲ್ಲ ಮಿತಿಯನ್ನೂ ಹೊಂದಿವೆ. ಈ ಮಿತಿಯನ್ನು ಲವಲವಿಕೆಯ ನಿರೂಪಣೆ, ಕಥನವನ್ನು ಅಥೆಂಟಿಕ್ ಆಗಿಸುವಷ್ಟು ದಟ್ಟವಾದ ನೈಜ ವಿವರಗಳು, ಮುದ ನೀಡಬಲ್ಲ ಭಾಷೆಯ ಸೊಗಡು ಇತ್ಯಾದಿ ಮೀರಬಲ್ಲದು ಎನ್ನುವುದು ನಿಜ. ಬಹುಶಃ ಕೃಷ್ಣಮೂರ್ತಿ ಚಂದರ್ ಅವರ ಕತೆಗಳ ನಿಜವಾದ ಆಕರ್ಷಣೆ ಅದು.

ಇಲ್ಲಿ ಎಸ್. ಸುರೇಂದ್ರನಾಥ್ ಅವರ ಕತೆಗಳು